Tel.: "UNIKARNATAK" Phone: (0836)-2215271

**ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.**

**KARNATAK UNIVERSITY, DHARWAD**

***NAAC Accreditted with "A" Grade 2014***

**UNIVERSITY WITH POTENTIAL FOR EXCELLENCE"**

**ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಘಟಕ** **SCH. CASTES & SCH. TRIBES CELL**

**ಪಾವಟೆನಗರ, ಧಾರವಾಡ** **Pavate Nagar, Dharwad-580003**

ಕವಿ.40(ಪಜಾ/ಪಪಂ)/2020–21/ಲ್ಯಾಪಟಾಪ/ ದಿನಾಂಕ:

# ಸುತ್ತೋಲೆ

**ವಿಷಯ:** ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿರುವ 2018–19ನೇ ಸಾಲಿನಲ್ಲಿ ನೊಂದಣೀ ಪಡೆದ ಸ್ಥಿರ ಮತ್ತು ನಿಯಮಿತ ಸಂಶೋಧನಾ ವಿದ್ಯಾರ್ಥಿಗಳಿಗೆ ಹಾಗೂ 2019–20ನೇ ಸಾಲಿನಲ್ಲಿ ಸ್ನಾತಕೋತ್ತರ ಪದವಿಯನ್ನು ಈಗಾಗಲೇ ಪೂರ್ಣಗೊಳಿಸಿರುವ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ SCP/TSP ಯೋಜನೆ ಅಡಿಯಲ್ಲಿ ಲ್ಯಾಪಟಾಪ್‌ಗಳನ್ನು ಖರೀದಿಸಿ ನೀಡುವ ಕಾರ್ಯ ಪ್ರಗತಿಯಲ್ಲಿರುವ ಕಾರಣ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸುವ ಕುರಿತು.

**ಉಲ್ಲೇಖ:** ಮಾನ್ಯ ಕುಲಪತಿಗಳ ಆದೇಶ ದಿನಾಂಕ: __________

******

ಮೇಲ್ಕಾಣಿಸಿದ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಎಲ್ಲ ಸ್ನಾತಕೋತ್ತರ/ಸ್ನಾತಕೋತ್ತರ ಕೇಂದ್ರ (ಹಾವೇರಿ, ಗದಗ ಮತ್ತು ಕಾರವಾರ) ವಿಭಾಗಗಳ ಮುಖ್ಯಸ್ಥರುಗಳಿಗೆ/ಆಡಳಿತಾಧಿಕಾರಿಗಳು/ಸಂಯೋಜಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿರುವ 2018–19ನೇ ಸಾಲಿನಲ್ಲಿ ನೊಂದಣಿ ಪಡೆದ ಸ್ಥಿರ ಮತ್ತು ನಿಯಮಿತ ಸಂಶೋಧನಾ ವಿದ್ಯಾರ್ಥಿಗಳಿಗೆ ಹಾಗೂ 2019–20ನೇ ಸಾಲಿನಲ್ಲಿ ಸ್ನಾತಕೋತ್ತರ ಪದವಿಯನ್ನು ಈಗಾಗಲೇ ಪೂರ್ಣಗೊಳಿಸಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಲ್ಯಾಪಟಾಪಗಳನ್ನು ಖರೀದಿಸಿ ವಿತರಿಸಲು SCP/TSP ಯೋಜನೆ ಅಡಿಯಲ್ಲಿ ಈಗಾಗಲೇ ಟೆಂಡರನ್ನು ಕರೆಯಲಾಗಿದೆ. ಕಾರಣ ಈ ಕಾರ್ಯವು ಪ್ರಗತಿಯಲ್ಲಿದ್ದು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹಾಗೂ ಸಮಯದ ಅಭಾವವಿರುವ ಕಾರಣ ಮುಂಗಡವಾಗಿ ಅರ್ಜಿಯನ್ನು ಆಹ್ವಾನಿಸಲಾಗಿದೆ. ಆದ್ದರಿಂದ ವಿಶ್ವವಿದ್ಯಾಲಯದ ಜಾಲತಾಣ www.kud.ac.in ದಲ್ಲಿ ಅರ್ಜಿಯನ್ನು ಪಡೆದುಕೊಂಡು ಈ ಕೆಳ ಕಾಣಿಸಿದ ದಾಖಲಾತಿಗಳೊಂದಿಗೆ ದಿನಾಂಕ **10–3–2021**ರ ಒಳಗಾಗಿ ತಾವು ವ್ಯಾಸಂಗಮಾಡಿದ ವಿಭಾಗಗಳ ಮುಖ್ಯಸ್ಥರುಗಳಿಗೆ ಸಲ್ಲಿಸಲು ತಿಳಿಯಪಡಿಸಿದೆ. ಮುಂದುವರೆದು ವಿಭಾಗದ ಮುಖ್ಯಸ್ಥರುಗಳು ವಿದ್ಯಾರ್ಥಿಗಳಿಂದ ಪಡೆದಕೊಂಡ ಎಲ್ಲ ಅರ್ಜಿಗಳನ್ನು ಉಪಕುಲಸಚಿವರು, ಪಜಾತಿ/ಪಪಂಗಡ ಘಟಕಕ್ಕೆ ದಿನಾಂಕ **12.03.2021**ರ ಒಳಗಾಗಿ ಸಲ್ಲಿಸಲು ಈ ಮೂಲಕ ಸೂಚಿಸಿದೆ.

| **ಕ್ರಸ್** | **ಸ್ನಾತಕೋತ್ತರ ವಿದ್ಯಾರ್ಥಿಗಳು ಸಲ್ಲಿಸಬೇಕಾದ ಪ್ರಮಾಣ ಪತ್ರಗಳು (ಧೃಡೀಕರಣದೊಂದಿಗೆ)** | **ಸಂಶೋಧನಾ ವಿದ್ಯಾರ್ಥಿಗಳು ಸಲ್ಲಿಸಬೇಕಾದ ಪ್ರಮಾಣ ಪತ್ರಗಳು (ಧೃಡೀಕರಣದೊಂದಿಗೆ)** |
|---|---|---|
| 1 | ಜಾತಿ ಪ್ರಮಾಣ ಪತ್ರ | ಜಾತಿ ಪ್ರಮಾಣ ಪತ್ರ |
| 2 | ಚಾಲ್ತಿ ಇರುವ ಪಾಲಕರ ಕುಟುಂಬದ ಆದಾಯ ಪ್ರಮಾಣ ಪತ್ರ | ಚಾಲ್ತಿ ಇರುವ ಪಾಲಕರ ಕುಟುಂಬದ ಆದಾಯ ಪ್ರಮಾಣ ಪತ್ರ |
| 3 | ಸ್ನಾತಕೋತ್ತರ ಅಂಕ ಪಟ್ಟಿ (ತೃತೀಯ ಮತ್ತು ಚತುರ್ಥ ಸೆಮಿಸ್ಟರ್) | ಪಿ.ಹೆಚ್.ಡಿ ಸ್ಥಿರ ನೊಂದಣಿ ಪ್ರಮಾಣ ಪತ್ರ |
| 4 | ವಿದ್ಯಾರ್ಥಿಯ ವಿಭಾಗದ ಗುರುತಿನ ಚೀಟಿ | ವಿದ್ಯಾರ್ಥಿಯ ವಿಭಾಗದ ಗುರುತಿನ ಚೀಟಿ |
| 5 | ವಿದ್ಯಾರ್ಥಿಯ ಆಧಾರ ಕಾರ್ಡ | ವಿದ್ಯಾರ್ಥಿಯ ಆಧಾರ ಕಾರ್ಡ |

ಸಹಿ ಇದೆ

**ಕುಲಸಚಿವರು**

**ಪ್ರತಿ ಸಾದರಪೂರ್ವಕವಾಗಿ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ;**

1) ಎಲ್ಲಾ ಸ್ನಾತಕೋತ್ತರ ಮುಖ್ಯಸ್ಥರುಗಳು ಕವಿವಿ ಆವರಣ, ಧಾರವಾಡ
2) ಎಲ್ಲಾ ಸ್ನಾತಕೋತ್ತರ ಕೇಂದ್ರಗಳ ಆಡಳಿತಾಧಿಕಾರಿಗಳು/ಸಂಯೋಜಕರುಗಳು ಹಾವೇರಿ, ಗದಗ ಮತ್ತು ಕಾರವಾರ
3) ಮಾನ್ಯ ಜಂಟಿ ನಿರ್ದೇಶಕರು, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ, ಡಿ.ಸಿ. ಕಂಪೌಂಡ, ಧಾರವಾಡ
4) ಸಹಾಯಕ ನಿರ್ದೇಶಕರು–ಗ್ರೇಡ–1, ತಾಲೂಕಾ ಸಮಾಜ ಕಲ್ಯಾಣ ಇಲಾಖೆ, ಡಿ.ಸಿ. ಕಂಪೌಂಡ, ಧಾರವಾಡ
5) ಹಣಕಾಸು ಅಧಿಕಾರಿಗಳ ಕಾರ್ಯಾಲಯ, ಕವಿವಿ, ಧಾರವಾಡ
6) ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ಕವಿವಿ ಧಾರವಾಡ
7) ಕುಲಪತಿಗಳ ಆಪ್ತ ಕಾರ್ಯದರ್ಶಿಗಳು ಕವಿವಿ ಧಾರವಾಡ